G 155 20-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ . ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಬೆಳಗಾಂ ಬಗ್ಗೆ ಕಡೇ ನಿರ್ಧಾರ

ಪುರಸಭೆ

ಮೈಸೂರು— ಪುರಸಭೆಯು ವಿಶೇಷ ಅಧಿವೇಶನವು " 1967-68 ನೇ ಸಾಲಿನ ಪುರಸಭೆಯ ಆಡಳಿತ ವರದಿಯನ್ನು ಪರಿಶೀಲಿಸಲು " ತಾ || 24 ನೇ ಮಂಗಳವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು

★

ಜನಸಂಘದ ಚಳವಳಿ

ಜಮ್ಮು – ಜಮ್ಮು ವಿಭಾಗದಲ್ಲಿ ಸರಕಾರ ಪಕ್ಷಪಾತ ತೋರಿಸುತ್ತಿದೆಯೆಂದು ಪ್ರತಿಭಟಿಸಿ ಜನಸಂಘದ ಚಳವಳಿಯಲ್ಲಿ ನಿನ್ನೆ ಸರಕಾರಿ ಕಚೇರಿ ಮುಂದೆ ದಸ್ತಗಿರಿ ಮಾಡಿಸಿಕೊಳ್ಳಲು 13 ಮಂದಿ ಜನಸಂಘದ ಸ್ವಯಂಸೇವಕರು ಬಂದರು.

●

ತೆರಿಗೆ ಹೆಚ್ಚುವುದು !

ನವದೆಹಲಿ— ತಾ || 28 ರಂದು ಪಾರ್ಲಿಮೆಂಟು ಮುಂದೆ ಇಡಲಾಗುವ ಬಜೆಟ್ಟಿನಲ್ಲಿ ರೂ 75 ರಿಂದ 80 ಕೋಟಿ ತೆರಿಗೆ ಹೆಚ್ಚುವುದೆಂದು ಹೇಳಲಾಗಿದೆ.

○

ಗೌರ್ನರ್‌ರವರು

ಕಾರವಾರ— ಗೌರ್ನರ್ ಶ್ರೀ ಧರ್ಮವೀರರವರು ಕಾರವಾರ ವಿಭಾಗದ ಅಭಿವೃದ್ಧಿಗೆ ತುಂಬಾ ಅವಕಾಶವಿದೆ ಎಂದು ಹೇಳಿದರು – ಅವರು ರೂ 2 ಲಕ್ಷದ ಸಿಂಟ್ ಜೋಸಿಫ್ಸ್ ಹೈ ಸ್ಕೂಲು ಕಟ್ಟಡದ ಅಸ್ತಿಭಾರ ಶಿಲೆ ಸ್ಥಾಪಿಸಿದರು.

○

ನಕ್ಸಲೈಟ್ ನಾಯಕನ ಹತ

ತ್ರಿವೇಂದ್ರ— ಉತ್ತರ ವೆನಾಡಿನಲ್ಲಿ 6 ಮನೆ ಲೂಟಿ ಮಾಡಿ ಇಬ್ಬರನ್ನು ಕೊಂದ ನಕ್ಸಲೈಟ್ ಗುಂಪಿನ ನಾಯಕ ವಾರ್ಗೀಸ್ ಪೋಲೀಸರೊಡನೆ ಘರ್ಷಣೆಯಲ್ಲಿ ಕೊಲ್ಲಲ್ಪಟ್ಟನು

ಗುಲ್ಬರ್ಗಾ ಘಟನೆ

ನವದೆಹಲಿ — ಗುಲ್ಬರ್ಗಾದಲ್ಲಿ ಇಬ್ಬರು ಪಾರ್ಲಿಮೆಂಟು ಸದಸ್ಯರನ್ನು ದಸ್ತಗಿರಿ ಮಾಡಿದ್ದನ್ನು ನ್ಯಾಯರೀತಿ ಪರಿಶೀಲಿಸಲಾಗುವುದೆಂದು ಗೃಹಮಂತ್ರಿ ಶ್ರೀ ಚವ್ಹಾಣ್ ಹೇಳಿದರು – ಈ ಸಂಬಂಧದಲ್ಲಿ ಮೈಸೂರು ಸರ್ಕಾರದ ಅಧಿಕಾರಿಗಳು, ಅಧಿಕಾರ ಮೀರಿ ವರ್ತಿಸಿರುವರೆಂದಿರುವರು – ತಮ್ಮ ಪಾರ್ಟಿ ಸದಸ್ಯರಿಗೆ ಗುಜರಾತು ಮತ್ತು ಮೈಸೂರು ಸರಕಾರಗಳು ತೋರಿಸುತ್ತಿರುವ ವರ್ತನೆ ಕುರಿತು ಪ್ರಧಾನಿ ಇಂದಿರಾರವರು ಅಸಮಾಧಾನ ವ್ಯಕ್ತಪಡಿಸಿರುವರು.

○

ತೊಡಕಿನ ಬೆಳಗಾಂ

ಬೆಂಗಳೂರು— ತೊಡಕಿನ ಬೆಳಗಾಂ ಸಮಸ್ಯೆ ಬಗ್ಗೆ ಲಿಖಿತ ಸೂಚನೆ ಬಂದ ನಂತರ ತಾವು ಪ್ರಧಾನಿ ಮತ್ತು ಗೃಹಮಂತ್ರಿಯವರೊಡನೆ ಚರ್ಚಿಸುವುದಾಗಿ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಆನರೊಡನೆ 110 ನಿಮಿಷಗಳು ಈ ಸಂಬಂಧವಲ್ಲಿ ಮಾತುಕತೆ ನಡೆಸಿದ ಕೇಂದ್ರ ಗೃಹ ಸಚಿವಾಲಯದ ಅಧಿಕಾರಿಗಳಿಗೆ ವಿವರಿಸಿದರು.

○

ಪೋಲೀಸ್ ಸ್ಟೇಷನ್‌ನಲ್ಲಿ ದೇವರು

ಬೆಂಗಳೂರು– ಹಾಸನ ಜಿಲ್ಲೆಯ ಒಂದು 4 ಅಡಿ ಎತ್ತರದ ಸುಂದರ ಚಾಮುಂಡೇಶ್ವರಿ ವಿಗ್ರಹವನ್ನು ಕದ್ದು ಒಂದು ಕಾರಿನಲ್ಲಿ ತರುತ್ತಿದ್ದ ಮೈಸೂರಿನ ಈಶ್ವರ ರಾವ್ ಮತ್ತು ಕೆಜಿಎಫ್‌ನ ನಾಥಮಲ್ ರನ್ನು ಪೋಲೀಸರು ಬಂಧಿಸಿ, ವಿಗ್ರಹವನ್ನು ಕ್ಲೆನಲ್ಯಾಂಡ್ ಪೋಲೀಸು ಸ್ಟೇಷನ್ ಮುಂದೆ ಇಟ್ಟಿರುವರು – ಭಕ್ತರು ದೇವರ ದರ್ಶನ ಮತ್ತು ಪೂಜೆ ಮಾಡುತ್ತಿರುವರು

★

ಮುತ್ತುಗಳ ಬಿಕರಿ

ನ್ಯೂಯಾರ್ಕ್— ಕೆನಡಿ ವಿಮಾನ ನಿಲ್ದಾಣದಲ್ಲಿ ಮೂರು ಬೆಳೆದ ಸುಂದರ ಹುಡುಗಿಯರು ಒಂದು ಗುಡಾರ ಹಾಕಿಕೊಂಡು ಮುತ್ತಿ 1 ಡಾಲರು ಎಂದು ಸೂಚಿಸಿದ್ದರು – ನಿಲ್ದಾಣದ ಜನರು ಅತ್ತ ಕಡೆ ನುಗ್ಗಿದರು – ಕೆಲ ನಿಮಿಷಗಳಲ್ಲಿ 4 ಡಾಲ್ಲರು ಸಿಕ್ಕಿತು – ಅಷ್ಟು ಹೊತ್ತಿಗೆ ನಿಲ್ದಾಣದ ಅಧಿಕಾರಿಗಳು ಬಂದು ರೂಲ್ಸಿಗೆ ವಿರುದ್ಧ ಎಂದು ತಿಳಿಸಿದಾಗ ಗುಡಾರ ತೆಗೆಯಲಾಯಿತು.

★

ತೆರಿಗೆ ಗಂಡಾಂತರ

ಆಮಸ್ಟರ್ಡಾಂ— ತನ್ನ ತೆರಿಗೆ ವರದಿ ಬಗ್ಗೆ ದೂರನ ವಿಷಯದಲ್ಲಿ ಕುಪಿತನಾದ ಓರ್ವ ಮಧ್ಯ ವಯಸ್ಸಿನವನು ತೆರಿಗೆ ಆಫೀಸಿಗೆ ನೆಟ್ಟಗೆ ಹೋಗಿ, ತನ್ನ ಬಟ್ಟೆಗಳನ್ನೆಲ್ಲಾ ತೆಗೆದು, ಅದನ್ನು ವಿಲೇವಾರಿಯಗೊಂಡ ಅಧಿಕಾರಿಗಳ ಮುಂದೆ ಹಾಕಿ, ಇದನ್ನೂ ನೀವು ತೆಗೆದುಕೊಳ್ಳಬಹುದು ಎಂದನು !

★

ಹೊಸದಾಗಿ ನೀರಾವರಿಗೆ

ಬೆಂಗಳೂರು— 70-71 ರಲ್ಲಿ ರಾಜ್ಯ ಸರಕಾರ 31800 ಎಕ್ರೆ ಹೊಸ ಭಾಗಗಳಿಗೆ ನೀರಾವರಿಗಾಗಿ ರೂ 383 ಲಕ್ಷ ಖರ್ಚು ಮಾಡಲು ಯೋಜಿಸಿರುವುದಾಗಿ ಶ್ರೀ ಅಂದಾನಪ್ಪ ದೊಡ್ಡಮೇಟಿ ಮಂತ್ರಿಗಳವರು ಹೇಳಿದರು.

○

ಗಾಂಧೀಜೀ ನಿಂದನೆ

ಕಲ್ಕತ್ತಾ— ಪದ್ಮಶ್ರೀ ಪ್ರಶಸ್ತಿ ಪಡೆದ ಚಲಚ್ಚಿತ್ರ ನಿರ್ದೇಶಕ ರಿತ್ವಿಕ್ ಘಟಕ್ ಗಾಂಧೀಜಿಯವರು ದೇಶದ ವಿಭಜನೆಗೆ ಮತ್ತು ಅದರೊಡನೆ ಬಂದಿರುವ ಎಲ್ಲ ದುರವಸ್ಥೆಗೂ ಕಾರಣವೆಂದು ಹೇಳಿದ್ದರು.

ಮಹಾರಾಷ್ಟ್ರ-ಮೈಸೂರು ಗಡಿ ವ್ಯಾಜ್ಯ

ನವದೆಹಲಿ— ಪಾರ್ಲಿಮೆಂಟು ಬಜೆಟ್ ಅಧಿವೇಶನ ಮುಗಿಯುವದರೊಳಗೆ ಮಹಾರಾಷ್ಟ್ರ–ಮೈಸೂರು ಗಡಿ ವ್ಯಾಜ್ಯ ವಿಷಯದಲ್ಲಿ ಕಟ್ಟಕಡೆ ನಿರ್ಣಯ ಮಾಡಲು ಸರಕಾರ ಯೋಜಿಸಿದೆ.

○

ಚಿಲಚ್ಚಿತ್ರದಲ್ಲಿ ಚುಂಬನಕ್ಕೆ ವಿರೋಧ

ತರೀಕೆರೆ— ರೋಟರಿ ಕ್ಲಬ್‌ನಲ್ಲಿ ಅಭಿನಂದಿಸಲ್ಪಟ್ಟ ಸುಪ್ರಸಿದ್ಧ ತಮಿಳು ನಟ ಶ್ರೀ ಜಮಿನಿ ಗಣೇಶ್ ಚಲಚ್ಚಿತ್ರಗಳಲ್ಲಿ ಮುತ್ತಿಡುವದನ್ನು ವಿರೋಧಿಸಿರುವರು.

ಎರಡು ಅಧಿಕಾರ

ಬೆಂಗಳೂರು— ಶಾಸನಸಭೆಯ ವಿರೋಧ ಪಕ್ಷದ ಮಾಜಿ ನಾಯಕ ಶ್ರೀ ಶಿವಪ್ಪನವರು, ಹೊಸ ಕಾಂಗ್ರೆಸ್ ಅಧ್ಯಕ್ಷ ಮತ್ತು ಕೇಂದ್ರ ಆಹಾರ ಮಂತ್ರಿ ಶ್ರೀ ಜಗಜೀವನ್ ರಾಂ ಎರಡು ಅಧಿಕಾರ ಹೊಂದಿರುವನ್ನು ಟೀಕಿಸಿ, ಅವರು ಮತ್ತೊಮ್ಮೆ ಎರಡು ಅಧಿಕಾರ ಹೊಂದಿದ್ದು ಮೈಸೂರಿಗೆ ಬಂದರೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದೆಂದು ಹೇಳಿದರು – ಜಗಜೀವನ ರಾಂ ರವರು ಪಾರ್ಟಿ ಕೆಲಸ ನಡೆಸಲು ಸರಕಾರಿ ಖರ್ಚಿನಲ್ಲಿ ಬಂದರೆಂದು ಆಪಾದಿಸಿದರು.

ಸಕ್ಕರೆ ವಲಯಗಳು

ನವದೆಹಲಿ— ಈಗಿರುವ 5 ಸಕ್ಕರೆ ವಲಯಗಳ ಬದಲು 15 ವಲಯಗಳನ್ನು ಸ್ಥಾಪಿಸುವಂತೆ ಟ್ಯಾರಿಫ್ ಕಮಿಷನ್ ಮಾಡಿರುವ ಶಿಫಾರಸನ್ನು ಸರ್ಕಾರ ಒಪ್ಪಿದೆ.

★

ಚಂಡಿಘರ್— ಹರಯಾಣಾದ ಈಗಿನ ಸರಕಾರವನ್ನು ಉರುಳಿಸಲು ಈಚೆಗೆ ನಡೆದ ಗೋಳೀಬಾರು ಬಗ್ಗೆ ನ್ಯಾಯಾಂಗ ವಿಚಾರಣೆಗೆ ಒತ್ತಾಯಮಾಡಲು ಜನಸಂಘ ನಿರ್ಧರಿಸಿದೆ.

ಮಹಾರ್ಜ ಕಮಿಷ್ನ ನಿರ್ಣಯ

ಹುಬ್ಬಳ್ಳಿ— ಮಹಾರ್ಜ ಕಮಿಷ್ನ ನಿರ್ಣಯವನ್ನು ಕೂಡಲೇ ಜಾರಿಗೆ ತರ ಬೇಕೆಂದು ಇಲ್ಲಿಯ ಕನ್ನಡ ಹಿತರಕ್ಷಕ ಸಂಘವು, ಹೊಸ ಕಾಂಗ್ರೆಸ್ ಅಧ್ಯಕ್ಷ ಜಗ ಜೀರ್ವ ರಾಂರಿಗೆ ಕೊಟ್ಟ ಮನವಿಪತ್ರದಲ್ಲಿ ಕೋರಿದೆ.

★ ಅಹಮದಾಬಾದ್— ನಾಜ್‌ಗ್ರಾಮದಲ್ಲಿ ಮಿಂಚುಹೊಡೆತದಿಂದ ಒಬ್ಬ ಸತ್ತು ಸತ್ತು 3 ಮಂದಿ ಗಾಯಗೊಂಡರು.

ಆಹ್ಲಾದಕರ
ಸುವಾಸನೆ

•★•

ಮೈಸೂರು ಗಂಧದ ಎಣ್ಣೆಯು

ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.
ಪರಿಶುದ್ಧವಾದ ಗಂಧದ ಎಣ್ಣೆಯು
ಮೈಸೂರು ಸರ್ಕಾರದ ಸೀಲು ಮತ್ತು
ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ
ದೊರೆಯುತ್ತವೆ.

•

ಮೈಸೂರು ಸರ್ಕಾರದ
ಗಂಧದಎಣ್ಣೆ ಕಾರ್ಖಾನೆ,
ಮೈಸೂರು ಮತ್ತು ಶಿವಮೊಗ್ಗ.

50 th GALA DAY
ನೇ ಆನಂದದ ದಿನ

ವುಡ್‌ಲಾಂಡ್ಸ್ ಅನೋಘ 8 ನೇ ವಾರ
ಶಿ ನ ಅನೋಘ ಪ್ರಾರಂಭ

.... ನೂಕುನುಗ್ಗಲಲ್ಲಿ ಜನ ಬಂದು ನೋಡುತ್ತಿರುವರು ....

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅನೋಘ ಕನ್ನಡ ಚಿತ್ರ

ಗೆಜ್ಜೆಪೂಜೆ
ಜ

ನಟವರ್ಗ— ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

[ದಿನ 3 ಪ್ರದರ್ಶನಗಳು]

ಆಪೆರಾ— ಅನೋಘ 3 ನೇ ವಾರ

.... ಆತ್ಯನೋಘ ಹಿಂದಿ ಚಿತ್ರ ....

ಪಾರ್ ಹಿ ಪಾರ್
ಶೆ ಲ

ಪಾತ್ರ – ವೈಜಯಂತಿ ಮಾಲ ಧರ್ಮೇಂದ್ರ

ದಿನ 3 ಆಟಗಳು

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore